SEVA BHARATHI
सेवा ही परमो धर्मः

ಸಂಚಿಕೆ : 08
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಆಗಸ್ಟ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## 1900 ವಿದ್ಯಾರ್ಥಿಗಳಿಗೆ ಉಚಿತ ಬರೆಯುವ ಪುಸ್ತಕ



ಪಟ್ರೂರು, ಕೋಡಿಯಾಲಬೈಲು, ಬೆಳಾಲು, ಕಲ್ಮಂಜ, ಪಿಲಿಗೂಡು, ಮಾರೂರು, ಮುಂಡಾಜೆ, ಬಡಕೋಡಿ, ಪೆರಿಂಜೆ, ಕನ್ಯಾಡಿ, ನೀರಚಿಲುಮೆ ಬಡಗಕಾರಂದೂರು, ಕಾಪಿನಡ್ಕ, ಉಂಬೆಟ್ಟು, ಕುತ್ಲೂರು, ಪಡ್ಡಂದಡ್ಕ ಶಾಲೆಗಳಿಗೆ

## ಉಚಿತ ನೋಟ್ ಪುಸ್ತಕಗಳ ವಿತರಣೆ

**ಉಡುಪಿ ತಾಲೂಕು ಆರೋಗ್ಯ ಕೇಂದ್ರದಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ**

**ಸಾಮೂಹಿಕ ವರಮಹಾಲಕ್ಷ್ಮಿ ವ್ರತಪೂಜೆ**

**ವಿಶೇಷ ದಿನದ ವಿಶಿಷ್ಟ ಆಚರಣೆ**

**ಬೆನ್ನುಹುರಿ ಅಪಘಾತಕ್ಕೊಳಗಾದ ಪ್ರಶಾಂತ್ ತಾವ್ರೋರವರ ಯಶೋಗಾಥೆ**

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಈ ತಿಂಗಳು 17 ಶಾಲೆಗಳಿಗೆ 9500 ನೋಟ್‌ಬುಕ್‌ಗಳನ್ನು ಕೊಡುಗೆಯಿತ್ತಿದ್ದೇವೆ. ರಾಮನಗರದ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡಿಸೇಬಲ್ಸ್‌ನ ಸಂಸ್ಥಾಪಕಾಧ್ಯಕ್ಷರಾದ ಶ್ರೀ ಕೆ.ಎಸ್. ಮಂಜುನಾಥ್ ಇವರು ಸ್ವತಃ ಹಲವು ಶಾಲೆಗಳಲ್ಲಿ ಉಪಸ್ಥಿತರಿದ್ದು ಕೊಡಮಾಡಿರುವ ಪುಸ್ತಕಗಳು ಮಕ್ಕಳಿಗೂ ಖುಷಿಯ ವಿಚಾರವೇ. ಮುಂದಿನ ವರ್ಷವೂ ಪುಸ್ತಕಗಳನ್ನು ಕೊಡುವೆನೆಂದು ಭರವಸೆಯಿತ್ತಿದ್ದಾರೆ.

ಬೆನ್ನುಹುರಿ ಮುರಿತ ಮತ್ತು ಅದರ ಬಗ್ಗೆ ಮಾಹಿತಿಗಳ ಕಾರ್ಯಾಗಾರ ವಿವಿಧ ಕಡೆಗಳಲ್ಲಿ ನಡೆಯುತ್ತಲೇ ಬಂದಿರುತ್ತದೆ. ಈ ನಿಟ್ಟಿನಲ್ಲಿ ಉಡುಪಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದ ಜಾಗೃತಿ ಕಾರ್ಯಾಗಾರದಲ್ಲಿ 88 ಮಂದಿ ಸಮುದಾಯ ಆರೋಗ್ಯಾಧಿಕಾರಿಗಳು (ಸಿಎಚ್‌ಒ) ಭಾಗವಹಿಸಿರುವುದು ಗಮನೀಯ ಅಂಶ.

ಮುಂದಿನ ತಿಂಗಳು ನಮಗೆಲ್ಲರಿಗೂ ವಿಶೇಷ ತಿಂಗಳು. ಸೆ. 5 ರಂದು ಅಂತರಾಷ್ಟ್ರೀಯ ಬೆನ್ನುಹುರಿ ಮುರಿತ ದಿನಾಚರಣೆ. ಈ ಪ್ರಯುಕ್ತ ಬೆಳ್ತಂಗಡಿಯಲ್ಲಿ ತಾಲೂಕು ಮಟ್ಟದ ಸಮಾವೇಶ ಮತ್ತು ಒಂದು ರ‍್ಯಾಲಿಯನ್ನು ಸಂಯೋಜಿಸಿರುತ್ತೇವೆ. ಸ್ಥಳೀಯ ಕಾಲೇಜಿನ ಎನ್.ಎಸ್.ಎಸ್. ಘಟಕದ ಸಹಭಾಗಿತ್ವವನ್ನು ಪಡಕೊಳ್ಳುತ್ತಿದ್ದೇವೆ.

ಇಷ್ಟಲ್ಲದೆ, ಮಂಗಳೂರಿನಲ್ಲಿ ರಾಜ್ಯಮಟ್ಟದ ರಿಹ್ಯಾಬ್‌ಮೇಳ, ಸಮಾವೇಶ ಹಾಗೂ ರ‍್ಯಾಲಿಗಳನ್ನು ಆಯೋಜಿಸಿ ಜನಪ್ರತಿನಿಧಿಗಳನ್ನು ಆಹ್ವಾನಿಸಿ ಸರಕಾರಕ್ಕೆ ನಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯ ಮಾಡಲಿದ್ದೇವೆ. ಯಶಸ್ವಿಗಾಗಿ ಈಗಾಗಲೇ ಪ್ರಯತ್ನಗಳು ಪ್ರಾರಂಭಗೊಂಡಿವೆ.

ಇತೀ ತಮ್ಮವ,
**ಕೆ. ವಿನಾಯಕ ರಾವ್**


## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888



## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫಿರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಪಟ್ಟೂರಿನ ಶ್ರೀರಾಮ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ಉಚಿತ ಬರೆಯುವ ಪುಸ್ತಕ



**ಪಟ್ಟೂರು:** ರಾಮನಗರದ ನವಚೇತನ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಸೇವಾಭಾರತಿ ಕನ್ಯಾಡಿ (ರಿ.) ಸಹಯೋಗದೊಂದಿಗೆ ಪಟ್ಟೂರಿನ ಶ್ರೀರಾಮ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ಉಚಿತ ಬರೆಯುವ ಪುಸ್ತಕಗಳನ್ನು ಆ.21ರಂದು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಟ್ರಸ್ಟ್ ನ ಅಧ್ಯಕ್ಷರಾದ ಕೆ.ಎಸ್.ಮಂಜುನಾಥ್ ವಿದ್ಯಾರ್ಥಿಗಳಿಗೆ ನೆರವಾಗುವಂತಹ ಈ ಕಾರ್ಯದಲ್ಲಿ ನನಗೆ ಆತ್ಮ ತೃಪ್ತಿ ಇದೆ. ನಾವು ಮಾಡುವ ಕಾರ್ಯ ಇನ್ನೊಬ್ಬರಿಗೆ ಪ್ರೇರಣೆ ನೀಡುವಂತಿರಬೇಕು. ವಿದ್ಯಾರ್ಥಿಗಳು ಕಲಿತ ಶಾಲೆಯನ್ನು ಮತ್ತು ಕಲಿಸಿದ ಗುರುಗಳನ್ನು ಯಾವತ್ತು ಮರೆಯಬಾರದು. ಚಿರಕಾಲ ಅವರಿಗೆ ಋಣಿಯಾಗಿರಬೇಕು ಎಂದರು. ವೇದಿಕೆ ಯಲ್ಲಿ ಉಪಸ್ಥಿತರಿದ್ದ ಕನ್ಯಾಡಿಯ ಸೇವಾಭಾರತಿಯ ಖಜಾಂಚಿ ಶ್ರೀ ವಿನಾಯಕ್ ರಾವ್ ಕನ್ಯಾಡಿ ಮಾತ ನಾಡುತ್ತಾ, ಜೀವನದಲ್ಲಿ ನಡೆದ ಆಕಸ್ಮಿಕ ಘಟನೆಯಿಂದಾಗಿ ಇಂದು ಗಾಲಿ ಕುರ್ಚಿ ಯಲ್ಲಿ ಜೀವನಪರ್ಯಂತ ಓಡಾಡುವ ಪರಿಸ್ಥಿತಿ ನನಗಿದ್ದರೂ ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಛಲ ನಿರಂತರವಾಗಿದೆ. ಜೀವನದಲ್ಲಿ ಎಲ್ಲವನ್ನು ಕಳೆದುಕೊಂಡಾಗ ಕುಗ್ಗದೆ ಧೈರ್ಯವಾಗಿ ಬದುಕು ನಡೆಸಿಕೊಂಡು ಹೋಗುವಂತಹ ಶಿಕ್ಷಣ ನಮ್ಮಲ್ಲಿರಬೇಕು ಎಂದರು. ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆದು ಕೀರ್ತಿವಂತರಾಗಿ ಬಾಳುವಂತೆ ಶುಭ ಹಾರೈಸಿದರು. ವೇದಿಕೆಯಲ್ಲಿ ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಅಧ್ಯಕ್ಷರಾದ ಕೃಷ್ಣ ಭಟ್ ಹಿತ್ತಿಲು, ಶಾಲಾ ಆಡಳಿತ ಸಮಿತಿಯ ಸಂಚಾಲಕರಾದ ಪ್ರಶಾಂತ್ ಶೆಟ್ಟಿ ದೇರಾಜೆ ಉಪಸ್ಥಿತರಿದ್ದರು.

ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ ಶೇಟ್, ನವಚೇತನ ಚಾರಿಟೇಬಲ್ ಟ್ರಸ್ಟ್ ರಾಮನಗರ ಹಾಗೂ ಸೇವಾಭಾರತಿ ಕನ್ಯಾಡಿ (ರಿ.) ಸಂಸ್ಥೆಗಳಿಗೆ ಧನ್ಯವಾದ ಅರ್ಪಿಸಿದರು. ಶಾಲಾ ಶಿಕ್ಷಕಿಯವರು, ಸಿಬ್ಬಂದಿ ವರ್ಗದವರು ಸಹಕರಿಸಿದರು.

## ಕೋಡಿಯಾಲಬೈಲು ಸರ್ಕಾರಿ ಶಾಲೆಗೆ ಉಚಿತ ಪುಸ್ತಕ ವಿತರಣೆ



**ಕೋಡಿಯಾಲಬೈಲು(ಆ.22):** ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರ ಗ್ರಾಮದ ಕೋಡಿಯಾಲಬೈಲು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸೇವಾಭಾರತಿ ಕನ್ಯಾಡಿ ಖಜಾಂಚಿ ಶ್ರೀ ಕೆ ವಿನಾಯಕ ರಾವ್ ಅವರ ಸಹಕಾರದೊಂದಿಗೆ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡೀಸೆಬಲ್ಸ್ ವತಿಯಿಂದ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಉಚಿತವಾಗಿ ವಿತರಿಸಿದರು.

ಈ ಸಂದರ್ಭದಲ್ಲಿ ನವಚೇತನ ಟ್ರಸ್ಟ್ ಫಾರ್ ಡಿಸೆಬಲ್ಸ್ ನ ಸಂಸ್ಥಾಪಕರಾದ ಮಂಜುನಾಥ. ಕೆ.ಎಸ್, ಸೇವಾಧಾಮದ ಸಂಸ್ಥಾಪಕರಾದ ಶ್ರೀವಿನಾಯಕ ರಾವ್ ಕನ್ಯಾಡಿ, ಕೋಡಿಯಾಲಬೈಲು ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಪಿಲೋಮಿನಾ ಸಿ.ಜೆ ಮತ್ತು ಶ್ರೀ ದುರ್ಗಾ ಶಕ್ತಿ ಮಹಿಳಾ ಸಂಘದ ಪ್ರಮುಖರಾದ ಶ್ರೀಮತಿ ಸವಿತಾ ರವೀಂದ್ರ ಪೂಜಾರಿ ಅವರು ಉಪಸ್ಥಿತರಿದ್ದರು.

## ಮುಂಡಾಜೆ ಸರಸ್ವತಿ ಆಂಗ್ಲ ಮಾಧ್ಯಮ ಶಾಲೆಗೆ ಉಚಿತ ಪುಸ್ತಕ ವಿತರಣೆ



**ಮುಂಡಾಜೆ (ಆ.22):** ಸೇವಾಭಾರತಿ ಖಜಾಂಚಿ ಶ್ರೀ ಕೆ ವಿನಾಯಕ ರಾವ್ ಅವರ ಸಹಕಾರದೊಂದಿಗೆ ನವಚೇತನ ಚಾರಿಟೇಬಲ್ ಟ್ರಸ್ಟ್ ನ ಸಂಸ್ಥಾಪಕರಾದ ಶ್ರೀ ಮಂಜುನಾಥ್ ಕೆ.ಎಸ್, ಸರಸ್ವತಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ನೀಡಿದರು. ಈ ಸಂಧರ್ಭದಲ್ಲಿ ಸರಸ್ವತಿ ಆಂಗ್ಲ ಮಾಧ್ಯಮ ಶಾಲೆಯ ಸಹಾಯಕ ಅಧ್ಯಾಪಕಿ ಶ್ರೀಮತಿ ಶ್ರೀಜ, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಚಂದ್ರಮತಿ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ನಾರಾಯಣ ಫಡ್ಕೆ ಮತ್ತು ಶ್ರೀಮತಿ ಭಾರತಿ ಫಡ್ಕೆ ಉಪಸ್ಥಿತರಿದ್ದರು.

## ಬೆಳಾಲು ಸರಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗೆ ಉಚಿತ ಪುಸ್ತಕ ವಿತರಣೆ




**ಬೆಳಾಲು(ಆ.23):** ಸೇವಾಭಾರತಿ ಕನ್ಯಾಡಿಯ ಖಜಾಂಚಿ ಶ್ರೀ ಕೆ.ವಿನಾಯಕ ರಾವ್ ಇವರ ಸಹಕಾರದೊಂದಿಗೆ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷರಾದ ಶ್ರೀ ಕೆ.ಎಸ್. ಮಂಜುನಾಥ್ ಇವರು ಬೆಳಾಲು ಸರಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ನೀಡಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಚಿದಾನಂದ ಉಪಸ್ಥಿತರಿದ್ದರು.

## ಕಲ್ಮಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ




**ಕಲ್ಮಂಜ (ಆ.22):** ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಅವರ ಸಹಕಾರದೊಂದಿಗೆ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡಿಸೆಬಲ್ಸ್‌ನ ಅಧ್ಯಕ್ಷರಾದ ಶ್ರೀ ಕೆ.ಎಸ್. ಮಂಜುನಾಥ್ ಇವರು ಕಲ್ಮಂಜ ಸಿದ್ದಬೈಲು ಪರಾರಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ಆಗಸ್ಟ್ 23 ರಂದು ನೀಡಲಾಯಿತು.

ಈ ಸಂಧರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ದಿನೇಶ್ ಗೌಡ, ಸೇವಾಭಾರತಿ ಟ್ರಸ್ಟಿನ ಸದಸ್ಯರಾದ ಶ್ರೀನಿವಾಸ್ ರಾವ್ ಕಲ್ಮಂಜ, ರಾಜಶೇಖರ್ ಹೆಬ್ಬಾರ್ ಪರಾರಿ ಮನೆ, ಯುವ ಸಬಲೀಕರಣ ಕ್ರೀಡಾ ಇಲಾಖೆ ಬೆಳ್ತಂಗಡಿ ಮೇಲ್ವಿಚಾರಕರಾದ ಶಾಂತಪ್ಪ, ಮುಖ್ಯ ಶಿಕ್ಷಕರಾದ ಧರ್ಣಮ್ಮ ಸಹ ಶಿಕ್ಷಕರಾದ ಶ್ರೀಮತಿ ರಾಜಿ, ಶ್ರೀಮತಿ ಮಮತಾ, ಗೌರವ ಶಿಕ್ಷಕರಾದ ಶ್ರೀಮತಿ ಜಯಶ್ರೀ ಮತ್ತು ಶ್ರೀಮತಿ ಕವಿತಾ ಎಸ್.ಡಿ.ಎಂ.ಸಿ. ಉಪಾಧ್ಯಕ್ಷರಾದ ಶ್ರೀಮತಿ ವಿದ್ಯಾ ಹಾಗೂ ಸದಸ್ಯರಾದ ಅಮಿತಾ, ದೇಜಮ್ಮ ಉಪಸ್ಥಿತರಿದ್ದರು.

## ನವಚೇತನ ಚಾರಿಟೇಬಲ್ ವತಿಯಿಂದ ಉಚಿತ ನೋಟ್ ಪುಸ್ತಕ ವಿತರಣೆ



**ಬೆಳ್ತಂಗಡಿ:** ಬೆಳ್ತಂಗಡಿ ತಾಲೂಕಿನ ಅಣಿಯೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಸ.ಹಿ.ಪ್ರಾ.ಶಾಲೆ ಪಿಲಿಗೂಡು ಇಲ್ಲಿ ದಿನಾಂಕ 23/08/2023ರಂದು ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡಿಸೇಬಲ್ಸ್ ರವರ ವತಿಯಿಂದ ಸೇವಾಭಾರತಿ ಕನ್ಯಾಡಿ ಇವರ ಸಹಯೋಗದೊಂದಿಗೆ ಎಲ್ಲಾ ಮಕ್ಕಳಿಗೂ ಉಚಿತ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷರಾದ 'ಇಸ್ಮಾಯಿಲ್' ರವರು ಹಾಗೂ ರೈತಬಂಧು ರೈಸ್‌ಮಿಲ್‌ನ ಮಾಲೀಕರಾದ 'ಶಿವಶಂಕರ್ ನಾಯಕ್'ರವರು, ಶಾಲಾ ಮುಖ್ಯೋಪಾಧ್ಯಾಯಿನಿ 'ಫ್ಲೇವಿಯ ಡಿಸೋಜಾ'ರವರು ಹಾಗೂ ಸಹಶಿಕ್ಷಕರು ಉಪಸ್ಥಿತರಿದ್ದರು.

## ಮಾರೂರು ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ



**ಮಾರೂರು(ಆ.22):** ಸೇವಾಭಾರತಿ ಕನ್ಯಾಡಿಯ ಸಹಯೋಗದಲ್ಲಿ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡಿಸೇಬಲ್‌ನ ಅಧ್ಯಕ್ಷರು ಶ್ರೀ ಕೆ.ಎಸ್. ಮಂಜುನಾಥ್ ಮಾರೂರು ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ನೀಡಿದರು.

ಈ ಸಂಧರ್ಭದಲ್ಲಿ ಶಾಲಾಭಿವೃದ್ಧಿ ಅಧ್ಯಕ್ಷರಾದ ಶ್ರೀ ಕೇಶವ ಆಚಾರ್ಯ, ಮುಖ್ಯೋಪಾಧ್ಯಾಯರು ಎನ್. ವೆಂಕಟೇಶ್, ಗ್ರಾಮ ಸಮೃದ್ಧಿ ಸಹಕಾರದ ಸಿ.ಇ.ಒ ಶ್ರೀಮತಿ ಶಶಿಕಲಾ ಹಾಗೂ ಶಿಕ್ಷಕ ವೃಂದ ಉಪಸ್ಥಿತರಿದ್ದರು.

## ಮಹನೀಯ ದಾನಿಗಳು

ಕೆ. ನಾಗರಾಜ್ ರಾವ್, ಹುಬ್ಬಳ್ಳಿ
ಶ್ರೀ ದುರ್ಗಾ ಮಾತೃಮಂಡಳಿ, ಕನ್ಯಾಡಿ
ವಿ. ಗೋಪಾಲಕೃಷ್ಣಯ್ಯ, ಬೆಂಗಳೂರು
ಶ್ರೀ ಸಂತೋಷ್ ಬೋನಂತ್ತಾಯ, ಪುತ್ತೂರು
ಶ್ರೀ ಸುಕೇಶ್, ಪುತ್ತೂರು
ಶ್ರೀ ಚೈತ್ರೇಶ್ ಸಿ, ಬೆಳ್ತಂಗಡಿ
ಶ್ರೀ ಸಚಿನ್ ಕುಮಾರ್, ಕಲ್ಮಂಜ
ಶ್ರೀ ಭೂಷಣ್, ಮಂಗಳೂರು
ಶ್ರೀ ಎಸ್.ಆರ್. ಸಿಂಧಿಯ, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಗಣೇಶ್, ಸೌತಡ್ಕ
ಶ್ರೀ ಕೃಷ್ಣಮೂರ್ತಿ ಭಟ್, ಬೆಳ್ತಂಗಡಿ
ಶ್ರೀ ಗೋಪಾಲಕೃಷ್ಣ, ಮಂಗಳೂರು
ಬೇಬಿ ವಿಹಾನ ಎಂ.ಎಂ. ನಿಡ್ಲೆ

## ಸೇವಾನಿಧಿ ದಾನಿಗಳು

ವೆಲ್ವೆಟ್ ಟ್ರಾವೆಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀ ಮಧ್ವಮೂರ್ತಿ ಪಿ, ಉಡುಪಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಕು. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ಶ್ರೀಮತಿ ಛಾಯಾ ಸಿ.ಎಸ್, ಉಜಿರೆ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಆನಂದ ಚಿನ್ನಪ್ಪ ಬೆಳವಟಗಿ, ಬೆಳಗಾವಿ
ಡಾ. ರಾಮಕೃಷ್ಣ ಜಿ.ಎನ್, ಕನ್ಯಾಡಿ
ಶ್ರೀ ಕೆ. ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಕೆ. ಕಾರ್ತಿಕ್, ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ಪುರುಷೋತ್ತಮ ಡಿ.ಎ, ಧರ್ಮಸ್ಥಳ
ಶ್ರೀ ಚಿತ್ರೇಶ್ ಶೆಟ್ಟಿ, ಉಜಿರೆ
ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು
ಶ್ರೀ ಜಯಾನಂದ ಎಂ., ಧರ್ಮಸ್ಥಳ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಮಧುಸೂದನ್, ಉಜಿರೆ
ಶ್ರೀ ಪುರಂದರ, ನಾರ್ಯ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಶ್ರೀ ರಜತ್ ರಾವ್, ಧರ್ಮಸ್ಥಳ
ಉಪ್ಪಿನಂಗಡಿ ಹವ್ಯಕ ಮಂಡಲ, ಉಪ್ಪಿನಂಗಡಿ
ಶ್ರೀ ಎಂ. ಲಕ್ಷ್ಮೀನಾರಾಯಣ ಭಟ್, ಹತ್ಯಡ್ಕ

## ಉಡುಪಿ ತಾಲೂಕು ಆರೋಗ್ಯ ಕೇಂದ್ರದಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ



**ಉಡುಪಿ (ಆ.28):** ಸೇವಾಭಾರತಿ ಕನ್ಯಾಡಿ ಹಾಗೂ ದಿವ್ಯಾಂಗ ರಕ್ಷಣಾ ಸಮಿತಿ ಕೊಡವೂರು ಇವರ ವತಿಯಿಂದ ಸಮುದಾಯ ಆರೋಗ್ಯ ಅಧಿಕಾರಿಗಳಿಗೆ ತಾಲೂಕು ಆರೋಗ್ಯ ಕೇಂದ್ರದಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರವನ್ನು ಆಗಸ್ಟ್ 28 ರಂದು ನಡೆಸಲಾಯಿತು.

ದಿವ್ಯಾಂಗ ರಕ್ಷಣಾ ಸಮಿತಿಯ ಮ್ಯಾನೇಜರ್ ಶ್ರೀ ಅಖಿಲೇಶ್ ಬೆನ್ನುಹುರಿ ಅಪಘಾತದ ಕಾರಣ, ಪರಿಣಾಮ ಹಾಗೂ ದ್ವಿತಿಯಾಂತರ ಸಮಸ್ಯೆಯ ಬಗ್ಗೆ ಮಾಹಿತಿ ಇತ್ತರು. ಈ ಸಂಧರ್ಭದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ವಾಸುದೇವ ಉಪಾಧ್ಯಾಯ, ಡಾ. ಅಂಜಲಿ, ನಗರಸಭಾ ಸದಸ್ಯರು ಶ್ರೀ ವಿಜಯ ಕೊಡವೂರು, ಸೇವಾಭಾರತಿಯ ಕ್ಷೇತ್ರ ಸಂಯೋಜಕರು ಶ್ರೀಶಶಾಂತ್ ಉಪಸ್ಥಿತರಿದ್ದರು.

ಒಟ್ಟು 88 ಮಂದಿ ಜಾಗೃತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು 22–12–2022 ರಂದು ಮರದಿಂದ ಬಿದ್ದು Spinal cord injury ಆಗಿ ಉಡುಪಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು 3 ತಿಂಗಳ ನಂತರ ಸೇವಾಧಾಮಕ್ಕೆ ಬಂದು ಸೇರಿರುತ್ತೇನೆ. ಇಲ್ಲಿಗೆ ಬಂದ ನಂತರ ಆರೋಗ್ಯದಲ್ಲಿ ಹಲವಾರು ಬದಲಾವಣೆಯನ್ನು ಕಂಡು ಕೊಂಡಿದ್ದೇನೆ. ಇಲ್ಲಿಗೆ ಬರುವಾಗ ನನಗೆ ಎದ್ದು ಕೂರಲು ಸಾಧ್ಯವಾಗು ತ್ತಿರಲಿಲ್ಲ. ಸೇವಾಧಾಮಕ್ಕೆ ಬಂದ ನಂತರ ಚಿಕಿತ್ಸೆ ಪಡೆದುಕೊಂಡು ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ. ಯಾರ ಸಹಾಯ ಇಲ್ಲದೆ ನನ್ನ ಕೆಲಸ ನಾನೇ ಮಾಡಿಕೊಳ್ಳುತ್ತಿದ್ದೇನೆ. ಇಲ್ಲಿ ಎಲ್ಲರು ಅತ್ಯಂತ ಒಳ್ಳೆಯ ರೀತಿಯಲ್ಲಿ ನೋಡಿಕೊಂಡಿದ್ದಾರೆ. ಸೇವಾಧಾಮದ ಎಲ್ಲಾ ಸದಸ್ಯರು, ಅಧ್ಯಕ್ಷರು ಮತ್ತು ಎಲ್ಲಾ ವರ್ಗದವರಿಗೂ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಧನ್ಯವಾದಗಳೊಂದಿಗೆ,

**– ಮಂಜುನಾಥ್ ಬಿ.ಜಿ**
ಮೂಡಿಗೆರೆ

## ಆಗಸ್ಟ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 03 |
| 2. | ವಾಕರ್ ವಿತರಣೆ | – 01 |
| 3. | ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ | – 10 |
| 4. | ಗಾಳಿ ಹಾಸಿಗೆ | – 01 |
| 5. | ಎಲ್ಬೊ ಸ್ಟಿಕ್ | – 01 |

*The world worries about disability more than disabled people do*

## ಬಡಕೋಡಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ



**ಬಡಕೋಡಿ (ಆ.22):** ಸೇವಾಭಾರತಿ ಕನ್ಯಾಡಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಅವರ ಸಹಕಾರದೊಂದಿಗೆ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡೀಸೆಬಲ್ಸ್‌ನ ಅಧ್ಯಕ್ಷರು ಶ್ರೀ ಮಂಜುನಾಥ್ ಕೆ.ಎಸ್ ಇವರು ಬಡಕೋಡಿ ಸರಕಾರಿ ಶಾಲಾ ಮಕ್ಕಳಿಗೆ ಉಚಿತ ಪುಸ್ತಕಗಳನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀ ವೆಂಕಟೇಶ್, ಗ್ರಾಮ ಸಮೃದ್ಧಿ ಸಹಕಾರದ ಸಿ.ಇ.ಒ ಶ್ರೀಮತಿ ಶಶಿಕಲಾ, ಮುಖ್ಯೋಪಾಧ್ಯಾಯರು ಶ್ರೀಮತಿ ಲೀನ ಡಿಸೋಜ, ಕೆ. ಹನುಮಂತಪ್ಪ, ಶ್ರೀಮತಿ ಸೌಮ್ಯ ಹಾಗೂ ಕುಮಾರಿ ಕುಸುಮಿತ ಉಪಸ್ಥಿತರಿದ್ದರು.


## ಪೆರಿಂಜೆ ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ



**ಪೆರಿಂಜೆ (ಆ.22):** ಸೇವಾಭಾರತಿ ಕನ್ಯಾಡಿ ಸಹಕಾರದೊಂದಿಗೆ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಪೆರಿಂಜೆ ಸರಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ವೆಂಕಟೇಶ್, ಸೇವಾಭಾರತಿ ಖಜಾಂಚಿ ಕೆ. ವಿನಾಯಕ ರಾವ್, ಶ್ರೀ ಸುಧಾಕರ್ ನೂಯಿ, ಶ್ರೀಮತಿ ಶಶಿಕಲಾ, ಮುಖ್ಯೋಪಾಧ್ಯಾಯರು ಶ್ರೀಮತಿ ನೀನಾ ಕುವೆಲ್ಲೋ, ಶ್ರೀ ರಾಜೇಶ್ ಎನ್, ಶ್ರೀ ವಿಶ್ವನಾಥ್ ಗೌಡ, ಶ್ರೀಮತಿ ಶಶಿಪ್ರಭ, ಪದ್ಮಾವತಿ, ಸಚ್ಚಿದಾನಂದ, ದೈಹಿಕ ಶಿಕ್ಷಕಿ ಪುಷ್ಪ ಉಪಸ್ಥಿತರಿದ್ದರು.

## ಸೇವಾ ಸಂಗಮ
## ಆನ್‌ಲೈನ್ ಕಾರ್ಯಗಾರ




ಆಗಸ್ಟ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಕೆ. ವಿನಾಯಕ ರಾವ್, ಸಂಸ್ಥಾಪಕರು, ಸೇವಾಧಾಮ ಖಜಾಂಚಿ, ಸೇವಾಭಾರತಿ ಹಾಗೂ ಶ್ರೀ ಬಿ.ಸಿ. ನರಸಿಂಹಮೂರ್ತಿ, ರಾಜ್ಯ ಸಂಯೋಜಕರು ವಿಕಲಚೇತನರ ಪುನಶ್ಚೇತನ ಯೋಜನೆ ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಚರ್ಚೆ: ನಮ್ಮಹಕ್ಕು – ನಮ್ಮಧ್ವನಿ ( ಯಾರು? ಏಕೆ? ಹೇಗೆ? ಎಲ್ಲಿ? ) ಎಂಬ ವಕಾಲತ್ತು ವಿಷಯದ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಚರ್ಚಾ ಕಾರ್ಯಕ್ರಮವನ್ನು ನಡೆಸಿದರು. ಈ ವಕಾಲತ್ತು ಕಾರ್ಯಕ್ರಮದಲ್ಲಿ ಒಟ್ಟು 101 ಮಂದಿ ಭಾಗವಹಿಸಿದ್ದರು.

## ಕನ್ಯಾಡಿ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ



ಕನ್ಯಾಡಿ(ಆ.21): ಸೇವಾಭಾರತಿ ಕನ್ಯಾಡಿ ಹಾಗೂ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ಡಿಸೇಬಲ್ ವತಿಯಿಂದ ಕನ್ಯಾಡಿ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ವಿತರಿಸಲಾಯಿತು.

ಈ ಸಂಧರ್ಭದಲ್ಲಿ ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್, ನವಚೇತನ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕಾಧ್ಯಕ್ಷರು ಶ್ರೀ ಮಂಜುನಾಥ್ ಕೆ.ಎಸ್, ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು ಶ್ರೀ ನಂದ ಭಟ್, ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಮರಿಯಪ್ಪ ಗೌಡ, ಶಿಕ್ಷಕವೃಂದ ಹಾಗೂ ಸೇವಾಭಾರತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

*Life would be tragic if it weren't funny*

## ಉಂಬೆಟ್ಟು ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ



**ವೇಣೂರು(ಆ.23):** ನವಚೇತನ ಚಾರಿಟೇಬಲ್ ಟ್ರಸ್ಟ್ ರಾಮನಗರ ಮತ್ತು ಸೇವಾಭಾರತಿ ಕನ್ಯಾಡಿ ಇವರ ವತಿಯಿಂದ ಉಂಬೆಟ್ಟು ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮವು ಆಗಸ್ಟ್ 23 ರಂದು ನಡೆಯಿತು.

ಕಾರ್ಯಕ್ರಮದಲ್ಲಿ ನವಚೇತನ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರಾದ ಕೆ.ಎಸ್. ಮಂಜುನಾಥ ಮತ್ತು ಸೇವಾಭಾರತಿ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಕನ್ಯಾಡಿ, ಗ್ರಾಮ ಪಂಚಾಯತ್ ಸದಸ್ಯ ಹರೀಶ್ ಪಿ.ಎಸ್., ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಧನಂಜಯ ಜೈನ್, ಉಪಾಧ್ಯಕ್ಷೆ ಚೇತನ ಬಾಲಭಾರತಿ ಶಿಕ್ಷಕಿ ಮಮತ, ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

## ಕುತ್ಲೂರು ಶಾಲೆಯ ಮಕ್ಕಳಿಗೆ ಉಚಿತ ಪುಸ್ತಕ




**ಕುತ್ಲೂರು(ಆ.24):** ಕುತ್ಲೂರು ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸೇವಾಭಾರತಿ ಕನ್ಯಾಡಿ ಇವರ ಆಶ್ರಯದಲ್ಲಿ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡೀಸೆಬಲ್ಸ್ ರಾಮನಗರ ಇವರ ವತಿಯಿಂದ ಉಚಿತ ಪುಸ್ತಕವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ನಾರಾವಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ರಾಜವರ್ಮ ಜೈನ್ ನೆರವೇರಿಸಿದರು. ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಕೆ. ರಾಮಚಂದ್ರ ಭಟ್ ನೋಟ್ ಬುಕ್ ನೀಡಿರುವ ಸಂಸ್ಥೆಯ ವ್ಯವಸ್ಥಾಪಕರನ್ನು ಅಭಿನಂದಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ರೂಪ ವಂದಿಸಿದರು.

## ಪಡ್ಡಂದಡ್ಕ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ



**ಪಡ್ಡಂದಡ್ಕ (ಆ.22):** ಸೇವಾಭಾರತಿ ಕನ್ಯಾಡಿ ಸಹಕಾರದೊಂದಿಗೆ ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ಫಾರ್ ಡೀಸೆಬಲ್ಸ್‌ನ ಅಧ್ಯಕ್ಷರು ಕೆ.ಎಸ್. ಮಂಜುನಾಥ್ ಪಡ್ಡಂದಡ್ಕ ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ನೀಡಿದರು.


ಈ ಸಂದರ್ಭದಲ್ಲಿ ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಶ್ರೀಮತಿ ಕಮಲ ಉಪಸ್ಥಿತರಿದ್ದರು.

## ಸಾಮೂಹಿಕ ವರಮಹಾಲಕ್ಷ್ಮಿ ವ್ರತಪೂಜೆ



**ಕನ್ಯಾಡಿ (ಆ.25):** ಶ್ರೀ ದುರ್ಗಾ ಮಾತೃ ಮಂಡಳಿ ಕನ್ಯಾಡಿ ಇವರ ವತಿಯಿಂದ ಸಾಮೂಹಿಕ ವರಮಹಾಲಕ್ಷ್ಮಿ ವ್ರತಪೂಜೆಯು ಕನ್ಯಾಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಗಸ್ಟ್ 25 ರಂದು ನಡೆಸಲಾಯಿತು.

## ಗಾಲಿಕುರ್ಚಿ ವಿತರಣೆ



ಶ್ರೀ ಕಿಶೋರ್ ಕುಲಾಲ್, ಬೆಳ್ತಂಗಡಿ



ಶ್ರೀ ಪರಮೇಶ್ವರಯ್ಯ, ಅರಸೀಕೆರೆ



ಶ್ರೀ ಅಬು ಸೂಫಿಯ, ಶಿರಸಿ



## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಶ್ರೀನಿವಾಸ ಅಯ್ಯಂಗಾರ್, ಬೆಂಗಳೂರು



ಶ್ರೀ ಗಣೇಶ್ ವಿ. ಶಿಂಡೆ, ಉಜಿರೆ



ಶ್ರೀ ಶಶಾಂತ್, ಉಡುಪಿ




ಶ್ರೀ ಸುಕೇಶ್, ಪುತ್ತೂರು



ರೊ. ಶರತ್ ಕೃಷ್ಣಪಡ್ವೆಟ್ನಾಯ, ಉಜಿರೆ



ಶ್ರೀಹರಿಶ್ ಪೂಂಜ, ಎಂ.ಎಲ್.ಎ. ಬೆಳ್ತಂಗಡಿ



ಶ್ರೀ ಭೂಷಣ್, ಮಂಗಳೂರು



ಶ್ರೀ ಚೈತ್ರೇಶ್, ಇಳಂತಿಲ




ಶ್ರೀ ಸಚಿನ್ ಗೌಡ, ಕಲ್ಮಂಜ



ಶ್ರೀಮತಿ ಸ್ವರ್ಣಗೌರಿ, ಉಜಿರೆ



ಶ್ರೀ ಚಿತ್ರೇಶ್ ಶೆಟ್ಟಿ, ಉಜಿರೆ



ಬೇಬಿ ವಿಹಾನ ಎಂ.ಎಂ, ನಿಡ್ಲೆ







ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ



## ವಾಕರ್ ವಿತರಣೆ

ಶ್ರೀ ದಯಾನಂದ, ಸೋಮವಾರಪೇಟೆ

## ನಿಮಗಿದು ತಿಳಿದಿರಲಿ

### ಬೆನ್ನುಹುರಿ ಅಪಘಾತವನ್ನು ನಿರ್ವಹಿಸುವ ವಿಧಾನಗಳು:

ದೈಹಿಕ ವ್ಯಾಯಾಮ, ಸಾಧನ ಸಲಕರಣೆಗಳು–ಆಪ್ತ ಸಮಾಲೋಚನೆ, ದೈನಂದಿನ ಚಟುವಟಿಕೆಗಳ ನಿರ್ವಹಣೆ ಬಗ್ಗೆ ತರಬೇತಿ, ಕುಟುಂಬದಲ್ಲಿ ಅರಿವು ಮತ್ತು ಸಹಕಾರ.

### ಉಪಯೋಗಿಸಬೇಕಾದ ಉಪಕರಣಗಳು

- ನೀರಿನ ಅಥವಾ ಗಾಳಿಯ ಹಾಸಿಗೆ (water or Air bed)
- ಕುಳಿತುಕೊಳ್ಳಲು ಗಾಳಿದಿಂಬು (Air Cushion)
- ಗಾಲಿಕುರ್ಚಿ (Wheel Chair)
- ಫೋಲಿಕ್ಯಾಟರ್ (Foley Catheter) ಬಳಸಿ ಬಿಸಾಡುವಂತದ್ದು.
- ಕೈಚೀಲ (hand glouse)
- ಸೋಂಕು ನಿರೋಧಕ ಔಷಧಿಗಳು

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದ ಪ್ರಶಾಂತ್ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ಮಾಲೀಕ ಪ್ರಶಾಂತ್ ತಾವ್ರೋರವರ ಯಶೋಗಾಥೆ






**ಬೆನ್ನುಹುರಿ ಅಪಘಾತಗೊಂಡರೂ ಪ್ರಶಾಂತ್ ಮನೆಯಲ್ಲಿ ಟಿ.ವಿ. ಮಿಕ್ಸಿ ರಿಪೇರಿ ಮಾಡಿಕೊಡುತ್ತಿದ್ದರು.**

**ಶ್ರೀ ಕೆ. ವಿನಾಯಕ ರಾವ್‌ರವರ ಸಲಹೆಯಂತೆ ಕಳಸ ತಾಲೂಕಿನಲ್ಲಿ ಪ್ರಶಾಂತ್ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ಎಂಬ ಹೆಸರಿನ ಅಂಗಡಿ ತೆರೆದು ಆದಾಯದ ಜೊತೆಗೆ ಆರೋಗ್ಯ ಸುಧಾರಿಸಿಕೊಳ್ಳುತ್ತಿದ್ದಾರೆ.**

ಕಾಯಕವೇ ಕೈಲಾಸ ಎಂಬಂತೆ ಸುಂದರವಾದ ಕುಟುಂಬದೊಂದಿಗೆ ಸಂತೋಷದಿಂದ ಪತ್ನಿ, ಇಬ್ಬರು ಪುತ್ರರೊಂದಿಗೆ ಸಮಯ ಕಳೆಯುತಿದ್ದ ವ್ಯಕ್ತಿಯು ರಸ್ತೆ ಅಪಘಾತ ಕ್ಕೊಳಗಾಗಿ ಬೆನ್ನುಹುರಿ ಅಪಘಾತಕ್ಕೊಳಗಾದ ಕಳಸದ ಪ್ರಶಾಂತ ತಾವ್ರೋ ಯಶೋಗಾಥೆ ನಿಮ್ಮ ಮುಂದೆ.

ಪ್ರಶಾಂತ್ ತಾವ್ರೋ ಚಿಕ್ಕಮಗಳೂರು ಜಿಲ್ಲೆ ಕಳಸ ತಾಲೂಕು ದುಂಡಿಗೆ ಗ್ರಾಮದಲ್ಲಿ 1977 ಜುಲೈ 31 ರಂದು ಜನಿಸಿದರು. ತಂದೆ ಫೆಡ್ರಿಕ್ ತಾವ್ರೋ ಹಾಗೂ ತಾಯಿ ಸೆಲಿನಾ ರೋಡ್ರಿಗಸ್. ತಮ್ಮ ಎಸ್.ಎಸ್.ಎಲ್.ಸಿ ಶಿಕ್ಷಣವನ್ನು ಕಳಸ ತಾಲೂಕಿನ ಸರಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ತದನಂತರ ಮನೆಯಲ್ಲಿ ಗದ್ದೆ ಕೆಲಸ ಹಾಗೂ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಕೆಲವು ವರ್ಷಗಳ ನಂತರ ಕಳಸವು ಗ್ರಾಮೀಣ ಪ್ರದೇಶವಾದ್ದರಿಂದ ಉದ್ಯೋಗಕ್ಕಾಗಿ ತಮ್ಮ ಚಿಕ್ಕಪ್ಪನ ಊರಾದ ಶಿವಮೊಗ್ಗ ಜಿಲ್ಲೆಗೆ ತೆರಳಿದರು. ಶಿವಮೊಗ್ಗ ಜಿಲ್ಲೆಯಲ್ಲಿ 2–3 ತಿಂಗಳ ಕಾಲ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ಕೆಲಸ ಕಲಿತ ನಂತರ ತಮ್ಮ ಊರಾದ ಕಳಸ ತಾಲೂಕಿಗೆ ಮರಳಿ ಬಂದರು.

ಊರಿಗೆ ಮರಳಿ ಬಂದ ನಂತರ ಕಳಸ ತಾಲೂಕಿನಲ್ಲಿ ಇಲೆಕ್ಟ್ರಾನಿಕ್ಸ್ (ಟಿ.ವಿ. ರಿಪೇರಿ, ಡಿಶ್ ರಿಪೇರಿ, ಮೊಟಾರ್ ರಿಪೇರಿ) ರಿಪೇರಿಗಳನ್ನು ಗ್ರಾಹಕರ ಮನೆ ಮನೆಗೆ ಹೋಗಿ ರಿಪೇರಿ ಮಾಡಿಕೊಡುತ್ತಿದ್ದರು. ಹೀಗೆ ತಮ್ಮ ಜೀವನ ಮುಂದುವರೆಸುತ್ತ 2008 ರಲ್ಲಿ ತಮ್ಮ ವೈವಾಹಿಕ ಜೀವನ ಪ್ರಾರಂಭಿಸಿದರು. ಹೀಗೆ ಎಲ್ಲರಂತೆ ಮಧ್ಯಮ ವರ್ಗದ ಕುಟುಂಬದವರ ಜೀವನಶೈಲಿಯಲ್ಲಿ ಸುಂದರವಾದ ಜೀವನ ಸಾಗಿಸುತ್ತಿದ್ದರು. ಆದರೆ 2015 ರಲ್ಲಿ ಕೆಲಸ ಮುಗಿಸಿ ಶಿವಮೊಗ್ಗದಿಂದ ಕಳಸಕ್ಕೆ ಬರಬೇಕಾದರೆ ರಾತ್ರಿ 10.30ರ ಸುಮಾರಿಗೆ ಕಾರು ಅಪಘಾತದಿಂದ ಬೆನ್ನುಹುರಿ ಅಪಘಾತಕ್ಕೊಳಗಾದರು. ತಮ್ಮ ಪ್ರಾಥಮಿಕ ಚಿಕಿತ್ಸೆಯನ್ನು ಸರಕಾರಿ ಆಸ್ಪತ್ರೆಯಲ್ಲಿ ಪಡೆದ ನಂತರ ಮುಂದಿನ ಚಿಕಿತ್ಸೆಗೆಂದು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆಂದು ಹೋದರು. ಆದರೆ ಇಲ್ಲಿ ಇವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ತಿಳಿಸದೆ 3 ತಿಂಗಳಿನಲ್ಲಿ ಗುಣಮುಖರಾಗುತ್ತಾರೆಂದು ಆಶ್ವಾಸನೆ ನೀಡಿದರು. ವಿಷಯ ತಿಳಿಯದೇ ಇದ್ದ ಕಾರಣ ತಾವು ಮೊದಲಿನಂತೆ ಆರಾಮವಾಗಿ ಸಾಮಾನ್ಯರಂತೆ ನಡೆಯಬಹುದೆಂದು ಸಂತಸದಲ್ಲಿದ್ದರು. ಆದರೆ 3 ತಿಂಗಳ ನಂತರ ಸಕ್ಕರೆ ಕಾಯಿಲೆ ಮತ್ತು ಒತ್ತಡಗಾಯದಂತಹ ದ್ವಿತೀಯಾಂತರ ಸಮಸ್ಯೆಗಳು ಪ್ರಾರಂಭವಾದ ಕಾರಣ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಹೋದರು. ಅಲ್ಲಿ ಚಿಕಿತ್ಸೆ ಸಾಧ್ಯವಿಲ್ಲ ಎಂದು ಹೇಳಿದಕಾರಣ ಫಾದರ್ ಮುಲ್ಲರ್ ಆಸ್ಪತ್ರೆಗೆ ಬಂದರು. ಅಲ್ಲಿ ಪ್ಲಾಸ್ಟಿಕ್ ಸರ್ಜರಿಯ ಮುಖಾಂತರ ಗಾಯಕ್ಕೆ ಚಿಕಿತ್ಸೆ ನೀಡಿದರು. ತದ ನಂತರ ವೈದ್ಯರು ಪ್ರಶಾಂತ್ ತಾವ್ರೋ ಅವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ತಿಳಿಸಿ, ಇನ್ನುಮುಂದೆ ನಡೆಯಲು ಸಾಧ್ಯವಿಲ್ಲವೆಂದು ತಿಳಿಸಿದರು. ಅಷ್ಟೇ ಅಲ್ಲದೆ ಫಿಸಿಯೋತೆರಪಿ, ವ್ಯಾಯಾಮದಂತಹ ಚಟುವಟಿಕೆಗಳನ್ನು ಮಾಡಲು ಸಲಹೆ ನೀಡಿ, ಸ್ವತಂತ್ರ ಜೀವನ ನಡೆಸಲು ಪ್ರಯತ್ನಿಸಬೇಕೆಂದು ತಿಳಿಸಿದರು. ತದನಂತರ ವೈದ್ಯರು 3 ತಿಂಗಳವರೆಗೆ ಕಳಸದ ವಾತಾವರಣ ಗಾಯ ಕಡಿಮೆ ಮಾಡಲು ಕಷ್ಟ ಎಂದು ತಿಳಿಸಿ ಮಂಗಳೂರಿನಲ್ಲಿ ಸ್ವಲ್ಪ ಸಮಯದವರೆಗೆ ವಾಸಿಸಲು ಸಲಹೆ ನೀಡಿದರು. ಇದರಂತೆ 3 ತಿಂಗಳ ಕಾಲ ಬಿ.ಸಿ.ರೋಡ್‌ನಲ್ಲಿ ರೂಮ್ ಮಾಡಿ ನಿಂತರು.

6 ತಿಂಗಳ ನಂತರ ಕಳಸ ತಾಲೂಕಿಗೆ ಬಂದರು. ಈ ಸಂಧರ್ಭದಲ್ಲಿ ಗ್ರಾಮಪಂಚಾಯತಿಯಿಂದ ಇವರಿಗೆ ಗಾಲಿಕುರ್ಚಿ, ಹುಮ್ಯಾನಿಟಿ ಟ್ರಸ್ಟ್ ವತಿಯಿಂದ ಧನಸಹಾಯ ನೀಡಿದರು. ಹೀಗೆ ದಿನ ಕಳೆದಂತೆ ಉದ್ಯೋಗಕ್ಕೇನಾದರೂ ಮಾಡಬೇಕೆಂದು ಚಿಂತಿಸಿ ತಮ್ಮ ಮೊದಲ ಉದ್ಯೋಗ ಇಲೆಕ್ಟ್ರಿಕಲ್ಸ್ ಉದ್ಯೋಗವನ್ನು ಪ್ರಾರಂಭಿಸಿದರು. ಮನೆಯಲ್ಲಿ ಟಿ.ವಿ. ಮಿಕ್ಸಿ ರಿಪೇರಿಗೆಂದು ಗ್ರಾಹಕರು ತಂದುಕೊಟ್ಟರೆ ಅದನ್ನು ರಿಪೇರಿ ಮಾಡಿಕೊಡುತ್ತಿದ್ದರು. ಆದರೆ ಎಲ್ಲಾ ಗ್ರಾಹಕರು ಮನೆಗೆ ಬರಲು ಕಷ್ಟಸಾಧ್ಯವೆಂದು ಸಲಹೆ ನೀಡಲು ಪ್ರಾರಂಭಿಸಿದರು. ಮುಂದೆ ಏನು ಮಾಡುವುದು ಎಂದು ತೋಚದೆ ಇದ್ದಾಗ ಸ್ನೇಹಿತರಿಂದ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕರಾವ್ ಬಗ್ಗೆ ತಿಳಿದು ಮಾತನಾಡಿದರು. ಶ್ರೀ ಕೆ. ವಿನಾಯಕರಾವ್ ಧೈರ್ಯ ತುಂಬಿ ಅಂಗಡಿ ತೆರೆಯುವಂತೆ ಸಲಹೆ ನೀಡಿ, ಅಂಗಡಿ ತೆರೆಯಲು ಸೇವಾಭಾರತಿಯಿಂದ ಧನಸಹಾಯ ಮಾಡುವುದೆಂದು ಪ್ರೋತ್ಸಾಹಿಸಿದರು. ಇದರಿಂದ ಸ್ಫೂರ್ತಿಗೊಂಡು ಕಳಸ ತಾಲೂಕಿನಲ್ಲಿ ಅಂಗಡಿ ಹುಡುಕಲು ಪ್ರಾರಂಭಿಸಿದರು. ಇವರಿಗೆ ಸರಿಹೊಂದುವಂತಹ ಅಂಗಡಿ ದೊರೆತ ಮೇಲೆ ಪ್ರಶಾಂತ್ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ಎಂಬ ಹೆಸರಿನ ಅಂಗಡಿ ತೆರೆದರು.

ಪ್ರಸ್ತುತ ಇವರು 9 ರಿಂದ 5ರ ವರೆಗೆ ಅಂಗಡಿಯಲ್ಲಿ ಕೆಲಸ ಮಾಡಿ ಮನೆಗೆ ಬಂದು 1 ಗಂಟೆಯ ಹೊತ್ತು ವ್ಯಾಯಾಮ ಮಾಡುತ್ತಾ ಎಲ್ಲರಿಗೂ ಮಾದರಿಯಾಗುವಂತೆ ಜೀವನ ಸಾಗಿಸುತ್ತಿದ್ದಾರೆ.

*Once you choose hope, anything’s possible*